**PW**- 1

**ದಿನಾಂಕಃ 20-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ.ಎಸ್.ಕೆ. ವಕೀಲರಿಂದಃ**

1. ನನ್ನ ಆಧಾರ ಕಾರ್ಡ, ಪಾನ ಕಾರ್ಡ, ಪಾಸ್ ಬುಕ್ ಹಾಗೂ ರೇಶನ ಕಾರ್ಡಿನಲ್ಲಿ ನನ್ನ ವಿಳಾಸ ಹೊನ್ನಾಳಿ ತಾಲೂಕಿನ ಸೊರಟೂರು ಗ್ರಾಮ ಎಂದು ಇರುತ್ತದೆ ಎಂದರೆ ಸರಿ. ನಾನು ಕಮಲಾ ನಗರ, ರಾಣೆಬೆನ್ನೂರಿನಲ್ಲಿ ವಾಸವಾಗಿದ್ದೇನೆಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ.

2. ನನಗೆ ಈ ಕೇಸಿನ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಮಾಹಿತಿಯನ್ನು ತಿಳಿದುಕೊಂಡೇ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನಗೆ ವ್ಯವಸಾಯದಿಂದ ತಿಂಗಳಿಗೆ 20 ಸಾವಿರ ರೂ. ಆದಾಯ ಇತ್ತು ಎಂದು ತೋರಿಸಲು ಯಾವುದೇ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುವುದಿಲ್ಲ.

3. ಅಪಘಾತಕ್ಕೀಡಾದ ಮೋಟಾರ ಸೈಕಲನ್ನು ನಾನೇ ಚಲಾಯಿಸುತ್ತಿದ್ದೇನು. ಅದು ನನ್ನ ಸ್ನೇಹಿತ ಶಶಿಕುಮಾರನ ಮೋಟಾರ ಸೈಕಲ್ ಆಗಿರುತ್ತದೆ. ಪೊಲೀಸರು ಚಾಲನಾ ಪರವಾನಿಗೆ ಇಲ್ಲದ ನನಗೆ ಮೋಟಾರ ಸೈಕಲ್ ಚಲಾಯಿಸಲು ಕೊಟ್ಟಿರುತ್ತಾರೆ ಹಾಗೂ ಇನ್ಸುರೆನ್ಸ ಇಲ್ಲದ ವಾಹನವನ್ನು ಚಲಾಯಿಸಲು ಕೊಟ್ಟಿರುತ್ತಾನೆ ಎಂದು ನನ್ನ ಮತ್ತು ನನ್ನ ಸ್ನೇಹಿತ ವಿರುದ್ಧ ಪೊಲೀಸರು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ-7 ಅಂತಿಮ ವರದಿಯಲ್ಲಿರುವ ಎಲ್ಲಾ ಅಂಶಗಳು ಸರಿ ಇದೆ ಎಂದು ತಿಳಿದುಕೊಂಡೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ದೋಷಾರೋಪಣ ಪಟ್ಟಿಯಲ್ಲಿ ರಾಜು ರಾಠೋಡ 1 ನೇ ಆರೋಪಿ ಎಂದು, ನನ್ನನ್ನು 2 ನೇ ಆರೋಪಿ ಎಂದು ಹಾಗೂ ನನ್ನ ಸ್ನೇಹಿತ ಶಶಿಕುಮಾರನನ್ನು 3 ನೇ ಆರೋಪಿಯಾಗಿ ತೋರಿಸಿರುತ್ತಾರೆ ಎಂದರೆ ಸರಿ. ನನ್ನ ವಿರುದ್ಧ ಪೊಲೀಸರು ಕಲಂ 3(1), 181 ಐಎಂವಿ ಕಾಯ್ದೆ ಅಡಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ 3 ನೇ ಆರೋಪಿ ಶಶಿಕುಮಾರ ವಿರುದ್ಧ ಕಲಂ 5, 180, 146, 156 ಮತ್ತು 196 ಐಎಂವಿ ಕಾಯ್ದೆ ಅಡಿ ದೋಷಾರೋಪಣ ಪಟ್ಟಿ

ಸಲ್ಲಿಸಿರುತ್ತಾರೆ ಎಂದರೆ ಸರಿ. ಮೇಲ್ಕಾಣಿಸಿದ ಯಾವುದೇ ಮಾಹಿತಿಯನ್ನು ನನ್ನ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿ.

4. ಅಪಘಾತವು ನನ್ನ ಅಜಾಗರುಕತೆ ಮತ್ತು ನಿರ್ಲಕ್ಷ್ಯತನದ ಚಾಲನೆಯಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹಾ ಪರಿಹಾರ ಬರುವುದಿಲ್ಲ ಎಂದು ಪೊಲೀಸರ ಜೊತೆ ಶಾಮೀಲಾಗಿ ಕ್ರೂಜರ್ ವಾಹನದ ಚಾಲಕನ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಸುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿರುವ ಅಂಶ ಸುಳ್ಳು ಎಂದು ಗೊತ್ತಿದ್ದರೂ ಸಹಾ ಅದನ್ನು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

5. ಅಪಘಾತವಾದ ತಕ್ಷಣ ನನ್ನನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಪ್ರಥಮ ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದಲೇ ಆಗಿದೆ ಎಂದು ಹೊನ್ನಾಳಿ ಆಸ್ಪತ್ರೆಯವರು ಕೇಸ ಶೀಟ ಮತ್ತು ಎಂಎಲಸಿಯಲ್ಲಿ ಅಪಘಾತ ನನ್ನ ತಪ್ಪಿನಿಂದಲೇ ಆಗಿದೆ ಎಂದು ಕಾಣಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ಉದ್ದೇಶಪೂರ್ವಕವಾಗಿ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಹೊನ್ನಾಳಿ ಆಸ್ಪತ್ರೆಯ ವೈದ್ಯರು ಮುಂದುವರೆದ ಚಿಕಿತ್ಸೆಗಾಗಿ ನನ್ನನ್ನು ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಹೋಗಿ ಎಂದು ಕಳುಹಿಸಿದ್ದರು ಎಂದರೆ ಸರಿ. ಹೊನ್ನಾಳಿ ಆಸ್ಪತ್ರೆ ಮತ್ತು ಮೆಗ್ಗಾನ ಆಸ್ಪತ್ರೆ ಎರಡೂ ಸರ್ಕಾರಿ ಆಸ್ಪತ್ರೆಗಳುಎಂದರೆ ಸರಿ. ನಾನು ಮೆಗ್ಗಾನ ಆಸ್ಪತ್ರೆಗೆ ಹೋಗದೇ ಹೆಚ್ಚಿನ ಪರಿಹಾರ ಪಡೆಯುವುದಕ್ಕಾಗಿ ಮ್ಯಾಕ್ಸ ಆಸ್ಪತ್ರೆಗೆ ಹೋಗಿ ಹೆಚ್ಚಿನ ಬಿಲ್ಲು ತಂದಿರುತ್ತೇನೆ ಎಂದರೆ ಸರಿಯಲ್ಲ. ಡಾ. ಶಿವಕುಮಾರ ಹೆಚ್.ಸಿ. ನನಗೆ ಮ್ಯಾಕ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-9 ರಲ್ಲಿ ಮೆಗ್ಗಾನ ಆಸ್ಪತ್ರೆಗೆ ಹೋಗಿ ಅಲ್ಲಿಂದ ಮ್ಯಾಕ್ಸ ಆಸ್ಪತ್ರೆಗೆ ಬಂದಿರುತ್ತಾರೆಂದು ನಮೂದು ಇದೆ ಎಂದರೆ ಸರಿ. ಮ್ಯಾಕ್ಸ ಆಸ್ಪತ್ರೆಯಲ್ಲಿ ನಾನು 11 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಮ್ಯಾಕ್ಸ ಆಸ್ಪತ್ರೆಯಲ್ಲಿ ನಿಪಿ-11 ರ ಪ್ರಕಾರ ರೂ.63,290/- ಖರ್ಚು ಮಾಡಿದ್ದೇನೆಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-12 ದಾಖಲೆಯನ್ನು ನಾನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೊನ್ನಾಳಿ ಆಸ್ಪತ್ರೆಯ ವೈದ್ಯರು ಮತ್ತು ಮಾಕ್ಸ

ಆಸ್ಪತ್ರೆಯ ಡಾ. ಶಿವಕುಮಾರ ಹೆಚ್.ಸಿ ಯವರ ಬಳಿ ಚಿಕಿತ್ಸೆ ಪಡೆದಿದ್ದನ್ನು ಬಿಟ್ಟು ಬೇರೆ ಎಲ್ಲಿಯೂ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ. ಹೊನ್ನಾಳಿ ಆಸ್ಪತ್ರೆಯ ದಾಖಲೆಗಳನ್ನು ತೋರಿಸದೇ ಶಾಕುಂತಲಾ ಆಸ್ಪತ್ರೆಯಿಂದ ಅಂಗನ್ಯೂನತೆ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ.  ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ಸೃಷ್ಟಿ ಹಾಜರು ಪಡಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಔಷದೋಪಚಾರ, ಸಾರಿಗೆ, ಪೌಷ್ಠಿಕ ಆಹಾರ, ಸಹಾಯಕರು ಹಾಗೂ ಇತರೆ ಖರ್ಚುಗಳ ಸಲುವಾಗಿ ರೂ. 4 ಲಕ್ಷ ಖರ್ಚು ಮಾಡಿದ್ದು, ಮುಂದಿನ ಚಿಕಿತ್ಸೆಗಾಗಿ ರೂ. 2 ಲಕ್ಷ ಅವಶ್ಯಕತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ವೈದ್ಯಕೀಯ ಖರ್ಚಿಗೆ ಸಂಬಂಧಪಟ್ಟ ಹಾಗೆ ಬಿಲ್ಲುಗಳನ್ನು ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನನಗೆ ಶೇ.100 ರಷ್ಟು ಅಂಗನ್ಯೂನತೆ ಆಗಿದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.  ನಾನು ಈ ದಿನ ಸಾಕ್ಷಿ ಹೇಳಲು ಹೊನ್ನಾಳಿ ತಾಲೂಕಿನ ಸೊರಟೂರಿನಿಂದ ಬಸ್ಸಿನಲ್ಲಿ ಬಂದಿರುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.